## ಸತ್ಯ ಧರ್ಮಗಳ ಪುನರುತ್ಥಾನ

‘ಸತ್ಯ’ ಮತ್ತು ‘ಧರ್ಮಗಳು’ ಪ್ರತಿಯೊಂದು ದೇಶದ ಎರಡು ಕಣ್ಣುಗಳು. ಮನುಷ್ಯನಿಗೆ ಕಣ್ಣು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ರಾಷ್ಟ್ರಕ್ಕೆ ಸತ್ಯ ಧರ್ಮವೆಂಬ ಕಣ್ಣುಗಳು. ಯಾವ ರಾಷ್ಟ್ರದಲ್ಲಿ ಸತ್ಯ ಧರ್ಮಗಳು ಹೋಗುವವೋ ಆ ದೇಶವು ಅಂಧಕಾರದಲ್ಲಿ ಮುಳುಗಿ ಹೋಗುತ್ತದೆ. ಸತ್ಯವೆಂದರೆ ಅಣುರೇಣುತೃಣಕಾಷ್ಟಗಳಲ್ಲಿ ಚೈತನ್ಯ ಶೀಲನಾಗಿ (ಸರ್ವವ್ಯಾಪಿ) ಭಗವಂತನಿರುವಂತೆ ನಂಬಿಕೆ. ಈ ಸತ್ಯವನ್ನು ಪ್ರಪಂಚಕ್ಕೆ ತಿಳಿಸುವ ಸಂದೇಶವೇ ‘ಸತ್ಯಮೇವ ಜಯತೇ’ ಇದು ಭಾರತ ದೇಶದ ಗುರಿ. ಧರ್ಮವನ್ನು ಸ್ಥೂಲವಾಗಿ ಅರ್ಥೈಸುವುದಾದರೆ ಅದೊಂದು ಧರಿಸುವ, ಭರಿಸುವ ಶಕ್ತಿ ಅರ್ಥಾತ್ ಸಹನ ಶೀಲತೆ. ಮತ್ತೊಂದು ದಿಕ್ಕಿನಿಂದ ಅರ್ಥೈಸುವುದಾದರೆ ಅದು ಎರಡು ಅಲಗಿನ ಕತ್ತಿ ಇದ್ದಂತೆ. ಧರ್ಮವು ಒಂದೊಂದು ಸಂದರ್ಭದಲ್ಲಿ ಒಬ್ಬೊಬ್ಬರಿಗೆ ಬೇರೆ ಬೇರೆಯಾಗಿರುತ್ತದೆ. ಒಬ್ಬ ಸೈನಿಕನ ಹಾಗೂ ಕೊಲೆಗಾರನ ಉದಾಹರಣೆಯನ್ನು ಇಲ್ಲಿ ತೆಗೆದು ಕೊಳ್ಳಬಹುದು. ಒಬ್ಬ ಕೊಲೆಗಾರ ತನ್ನ ಆಯುಧ (ಕತ್ತಿ) ವನ್ನು ಉಪಯೋಗಿಸಿ ಜನರನ್ನು ಕೊಂದು ಅವರನ್ನು ದೋಚಿದಾಗ ಅದು ಜಗತ್ತಿನ ಕಣ್ಣಿನಲ್ಲಿ ಅಧರ್ಮ. ಆದರೆ ಅದೇ ಒಬ್ಬ ಸೈನಿಕನು ಕತ್ತಿಯನ್ನು ಬಳಸಿ ವೈರಿಯನ್ನು ಕೊಂದರೆ ಅದು ರಾಷ್ಟ್ರಧರ್ಮವಾಗುತ್ತದೆ. ಆದರೆ ಇಬ್ಬರು ಒಂದೇ ಆಯುಧವನ್ನು ಬಳಸಿ ಹತ್ಯೆಯನ್ನು ಮಾಡುತ್ತಿರುವರಾದರೂ ಒಂದು ಅಧರ್ಮ ಹಾಗೂ ಇನ್ನೊಂದು ಧರ್ಮವೆಂದು ಕರೆಯಿಸಿಕೊಳ್ಳುತ್ತದೆ.

ಆದ್ದರಿಂದ ಪ್ರತಿಯೊಬ್ಬನಿಗೆ ಅವನದ್ದೇ ಆದ ಧರ್ಮವಿದೆ. ‘ಸೆಕ್ಯುಲರಿಸಂ’ ಈ ದೇಶದಲ್ಲಿ ಜನ್ಮತಾಳಿದ ಅನಂತರ ಸತ್ಯ ಧರ್ಮಗಳೆರಡು ಕುರುಡಾಗಿ ರಷ್ಯಾದ ಕಮ್ಯುನಿಸ್ಟ್ ವಾದಕ್ಕಿಂತಲೂ ಕಠೋರವಾದ ‘ಸೋಷಿಯಲಿಸಂ’ ಜನ್ಮತಾಳಿದೆ. ಈ ವಾದದ ಪ್ರಕಾರ ‘ಹಿಂದು’ ಎಂದರೆ ಜ್ಯಾತಿವಾದಿ, ಇಸ್ಲಾಂ ಎಂದರೆ ಅದು ಪ್ರಗತಿಪರ ಎಂದು ಹಾಗೆಯೇ ಇದರ ಪ್ರಕಾರ ‘ ಸತ್ಯ’ ವೆಂದರೆ ಕಷ್ಟಪಟ್ಟು ದುಡಿಯುವವರ ತಲೆಯನ್ನು ಒಡೆದು ಸೋಮಾರಿಗಳಿಗೆ ಉಣಬಡಿಸುವುದು ಇತ್ಯಾದಿ. ನಮ್ಮ ದೇಶದ ಸಂಸ್ಕೃತಿಯು ವೇದ ಉಪನಿಷತ್ತು, ಪುರಾಣ, ಶಾಸ್ತ್ರಗಳ ಆಧಾರದ ಮೇಲೆ ನಿಂತಿದೆ. ನಮ್ಮ ಪವಿತ್ರ ಶ್ರಧ್ಧಾ ಕೇಂದ್ರಗಳಾದ ದೇವಾಲಗಳು ವೇದಗಳಲ್ಲಿ ವಿವರಿಸಿರುವಂತೆ ಭಗವಂತನ ಇರುವಿಕೆಯನ್ನು ಮತ್ತು ವ್ಯಾಪ್ತಿಯನ್ನು ಪ್ರತಿಬಿಂಬಿಸುತ್ತವೆ. ದೇವಾಲಯಗಳಲ್ಲಿನ ಮೂರ್ತಿಗಳು ಹಾಗೂ ಕೆತ್ತನೆಗಳು ವೇದಶಾಸ್ತ್ರಗಳಲ್ಲಿರುವ ಅತ್ಯುತ್ತಮ ಚಿಂತನೆಗಳನ್ನು ಜನ ಸಾಮಾನ್ಯರಿಗೆ ಮುಟ್ಟಿಸುವುದೇ ಅದರ ಗುರಿ. ನಮ್ಮ ರಾಷ್ಟ್ರ ಧರ್ಮವು ಮೇಲ್ನೋಟಕ್ಕೆ ಪೂರ್ಣ ಆಧ್ಯಾತ್ಮಿಕ ಚಿಂತನೆಯ ಪ್ರತೀಕವಾಗಿ ಕಂಡರೂ ಅದರ ಮೂಲ ತತ್ತ್ವದಲ್ಲಿ ಆತ್ಮರಕ್ಷಣೆಗಾಗಿ ‘ಶಾಪಾದಪಿ ಶರಾದಪಿ’ ಎಂಬ ಭಾವನೆಯನ್ನು ಒಳಗೊಂಡಿರುತ್ತದೆ.

ಭಾರತ ದೇಶದಲ್ಲಿ ಧರ್ಮ ಗ್ರಂಥಗಳು ಹಲವರಾದರೂ ಅವುಗಳ ತತ್ತ್ವ ಚಿಂತನೆ ಹಾಗೂ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವ ಗುರಿ ಮಾತ್ರ ಎಲ್ಲಾ ಧರ್ಮಗಳದ್ದೂ ಒಂದೇ. ‘ಭಗವಂತಾನೊಬ್ಬನೇ ನಾಮ ಹಲವು’ ಎಂಬ ಮಾತನ್ನು ಯಾವ ತತ್ತ್ವ ಶಾಸ್ತ್ರವೂ ಅಲ್ಲಗಳೆದಿಲ್ಲ. ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವ ಮಾರ್ಗವನ್ನು ವೈದಿಕ ಧರ್ಮ ಬಿಟ್ಟರೆ ಬೇರಾವುದೇ ಧರ್ಮದಲ್ಲಿಯೂ ಪ್ರತಿಪಾದಿಸಿಲ್ಲ.ಈ ದೇಶದ ಸಂರಕ್ಷಕರು ಮತ್ತು ಧರ್ಮದರ್ಶಿಗಳು ಈ ನೀಡಿದ ಋಷಿ ಮುನಿಗಳು. ಈ ಋಷಿ ಮುನಿಗಳು ‘ ಮನಸೇ ಮಂದಿರ’ ಎಂಬ ಕಲ್ಪನೆಯನ್ನು ಪ್ರಪಂಚಕ್ಕೆ ಸಾರಿದ ಮೊಟ್ಟ ಮೊದಲಿಗರು. ಇವರ ನಿರಂತರ ಸಾಮಾಜಿಕ ಅಧ್ಯಯನ ಮತ್ತು ಚಿಂತನೆಯಿಂದ ಸಮಾಜದಲ್ಲಿ ಶಾಂತಿ ನೆಲೆಸಿತ್ತು.

ಎಲ್ಲೆಲ್ಲಿ ಮನವೀಯತೆ ಇದೆಯೋ ಅಲ್ಲೆಲ್ಲಾ 'ಮನಸೇ ಮಂದಿರ' ಎಂಬ ಜಾನ ಪ್ರಸಾರವಾಯಿತು ಮತ್ತು ಅದರ ಅರ್ಥವ್ಯಾಪ್ತಿ ವಿಶ್ವಧರ್ಮವಾಯಿತು. ಈ ಬಗೆಯ ಶಾಂತಿ ಸಂದೇಶವನ್ನು ಭಾರತೀಯ ಗ್ರಂಥಗಳು ಸಾರಿರುವುದು. ಹಾಗಿದ್ದರಲ್ಲಿ ಭಾರತೀಯ ಧರ್ಮ ಗ್ರಂಥಗಳು ಕೇವಲ ಯೋಗ ಮತ್ತು ಜಪ ತಪಗಳನ್ನೇ ಸಾರಿವೆಯೇ? ಆತ್ಮ ರಕ್ಷಣೆಗಾಗಿ ಶೌರ್ಯ, ವೀರ್ಯಗಳನ್ನು ಪ್ರತಿಪಾದಿಸಿಯೇ ಇಲ್ಲ ಎಂಬುದು ಚರ್ಚಾರ್ಹ ವಿಷಯ.

ನಮ್ಮ ರಾಷ್ಟ್ರದ ಪವಿತ್ರ ಗ್ರಂಥಗಳಾದ ರಾಮಾಯಣ, ಮಹಾಭಾರತ, ಭಾಗವತ ಮುಂತಾದವುಗಳು ಮೇಲಿನ ಪ್ರಶ್ನೆಗಳಿಗೆ ಉತ್ತರ ನೀಡುತ್ತವೆ. ರಾಮಾಯಣವು ರಾಮನ ಉನ್ನತ ಅದರ್ಶ ಜೀವನ ಮತ್ತು ಶಾಂತಿ ಸಂದೇಶವನ್ನು ಸಾರಿದೆ. ರಾಮನು ಈ ದೇಶ ಧರ್ಮದ ಪ್ರತೀಕ. ಮಾನವನು ತನ್ನ ಜೀವನದಲ್ಲಿ ಸಾಧಿಸಿದ ಹಾಗೂ ಸಾಧಿಸಲಾಗದ ಫಲಗಳನ್ನು ಶ್ರೀರಾಮನಿಗೆ ಅರ್ಪಿಸುವುದೇ ಜೀವನ ಮೌಲ್ಯವಾಗಿದೆ. ಅದಲ್ಲದೇ ಪ್ರತಿಯೊಬ್ಬನು ತನ್ನ ಜೀವನದ ಅಂತ್ಯಕಾಲದಲ್ಲಿ ರಾಮನಾಮವನ್ನು ಜಪಿಸುತ್ತಾನೆ. ಇಂತಹ ಶ್ರೀರಾಮನ ಆದರ್ಶದಲ್ಲಿ ಕೇವಲ ಶಾಂತಿಯೇ ತುಂಬಿರಲಿಲ್ಲ. 'ದುಷ್ಟ ಶಿಕ್ಷಣ ಶಿಷ್ಟ ರಕ್ಷಣ' ಎಂಬ ಸಂದೇಶವು ತುಂಬಿತ್ತು. ಮರ್ಯಾದಾ ಪುರುಷೋತ್ತಮನಾದ ಶ್ರೀರಾಮಚಂದ್ರನು ರಾಷ್ಟ್ರ ಮರ್ಯಾದೆಯನ್ನು ಕಾಪಾಡಲು ಸತ್ಯಾಗ್ರಹ ಮಾಡಲಿಲ್ಲ. ಆದರೆ ತಾಟಕಿ, ಖರದೂಷಣ, ಹತ್ತು ತಲೆಯ ರಾವಣ, ಕುಂಭಕರ್ಣ ಮುಂತಾದವರನ್ನು ಸಂಹರಿಸಿ ಧರ್ಮ ಸಂಸ್ಥಾಪನೆಯನ್ನು ಮಾಡಿದ. ಅದೇ ರೀತಿ ಮಹಾಭಾರತದಲ್ಲಿ ಗೀತಾಚಾರ್ಯನು ಬಾಲ್ಯದಿಂದಲೂ ಕ್ರೂರ ರಾಕ್ಷಸರಾದ ಪೂತನಿ, ಕಂಸ, ಶಿಶುಪಾಲ, ಜರಾಸಂದ ಮುಂತಾದ ರಾಕ್ಷಸರನ್ನು ಕೊಂದು ಸತ್ಯ ನಿಷ್ಠೆಯನ್ನು ಪ್ರಕಟಿಸಿದ. ಭಾರತದ ಪ್ರಾಚೀನ ಅರ್ವಾಚೀನ ಸಮಾಜ ಶಾಸ್ತ್ರಜ ಈ ಪರಮ ಪುರುಷನು. ಮಹಾಭಾರತ ಯುದ್ಧದ ಮುಂಚೂಣಿಯಲ್ಲಿ ನಿಂತು ವಿಶ್ವಮಾನವ ಧರ್ಮದ ಅತ್ಯುತ್ತಮ ಚಿಂತನೆಯನ್ನು ಅರ್ಜುನನೊಂದಿಗೆ ಮಾಡಿದ್ದಾನೆ. ಅರ್ಜುನನಿಗೆ ನ್ಯಾಯ ನಿಷ್ಠೆ ಕಾಪಾಡಲು ಯುದ್ಧದ ಅವಶ್ಯಕತೆಯನ್ನು ಬೋಧಿಸಿ 'ಯುದ್ಧಾಯ ಕೃತನಿಶ್ಚಯಃ' ಎಂಬ ಅಮರವಾಣಿಯನ್ನು ಕೊಟ್ಟಿದ್ದಾನೆ.ಧರ್ಮ ಸಂಸ್ಥಾಪನೆಗಾಗಿ ಮಹಾಭಾರತದಂತಹ ಘೋರ ಯುದ್ಧವೇ ನಡೆಯಬೇಕಾದ ಅಗತ್ಯವನ್ನು ಶ್ರೀ ಕೃಷ್ಣನು ಹೇಳಿರುವನು. ಯುದ್ಧದ ಅನಂತರವೇ ಭಾರತ ದೇಶದಲ್ಲಿ ಶಾಂತಿ ಸ್ಥಾಪನೆಯಾಗಿದ್ದು. ಮಹಾವಿಷ್ಣುವಿನ ಅವತಾರಗಳೆಲ್ಲವೂ ಧರ್ಮರಕ್ಷಣೆಯ ಚಿಂತನೆಯ ತತ್ತ್ವದ ಮೇಲೆ ಅಧಾರಿತವಾಗಿದೆ.

ಮಹಾವಿಷ್ಣು ಶಂಖ, ಚಕ್ರ, ಗದಾ, ಪದ್ಮ ಹೀಗೆ ಆಯುಧಗಳನ್ನು ಧರಿಸಿದ್ದಾನೆ. ಶ್ರೀಕೃಷ್ಣನು ಸುದರ್ಶನ ಚಕ್ರವನ್ನು. ಆಂಜನೆಯ ಗದೆಯನ್ನೂ, ಕಾಳಿಕಾ ದೇವಿಯು ಸ್ತ್ರೀದೇವತೆಯಾದರೂ ಕೈಯಲ್ಲಿ ಖಡ್ಗ, ತ್ರಿಶೂಲ ಮುಂತಾದ ಆಯುಧ ಹೊಂದಿರುವುದನ್ನು ಗಮನಿಸಬಹುದು. ಶ್ರೀರಾಮನನ್ನು ನಾವು ಗುರುತಿಸುವುದು ಅವನ ಕೋದಂಡದಿಂದಲೇ ಹಾಗೆಯೇ ಕೈಲಾಸನಾಥ ಪರಮೇಶ್ವರನ ಕೈಯಲ್ಲಿ ತ್ರಿಶೂಲವಿದೆ. ಮಹಾವಿಷ್ಣುವಿನ ಅವತಾರಗಳೆಲ್ಲವೂ ಒಂದಲ್ಲಾ ಒಂದು ಆಯುಧದಿಂದ ಗುರುತಿಸಲಾಗುತ್ತದೆ. ಭಾರತೀಯ ಸಂಸ್ಕೃತಿಯ ಧರ್ಮ ಗ್ರಂಥಗಳು ಶಾಂತಿಯನ್ನು ಮಾತ್ರ ಸಾರದೇ ಧರ್ಮ ರಕ್ಷಣೆಗಾಗಿ ಹಾಗೂ ಆತ್ಮರಕ್ಷಣೆಗಾಗಿ ವೀರ್ಯತೆ ಮತ್ತು ಶೌರ್ಯತೆಯನ್ನೂ ಸಾರಿವೆ ಎಂಬುದು ಇದರಿಂದ ತಿಳಿಯುತ್ತದೆ. ಭಾರತ ದೇಶದಲ್ಲಿ ಈಗ ರಾಷ್ಟ್ರ ಧರ್ಮವಾದ ಹಿಂದೂ ಧರ್ಮವು.